



ಅರುಣ ಪಿ. ಭಟ್ಟ

## ವಾರಭವಿಷ್ಯ: 22.06.2023ರಿಂದ 28.06.2023ವರೆಗೆ




ವಾರದ ಆರಂಭದಲ್ಲಿ ಸರಕಾರಿ ಕಚೇರಿ ಕೆಲಸದಲ್ಲಿ ನಿಮ್ಮ ಪ್ರಯತ್ನದಿಂದ ಶುಭವಾಗುತ್ತದೆ. ಚಿಕ್ಕ ಪ್ರವಾಸ, ಮನೆಯಲ್ಲಿ ಗೊಂದಲ ಪ್ರವೃತ್ತಿ, ಬೇಡದ ವ್ಯಕ್ತಿಗಳ ಆಗಮನ. ತಾಯಿಯ ಆರೋಗ್ಯ ವ್ಯತ್ಯಾಸ. ನಿಮ್ಮ ನೌಕರರ ಕೆಲಸದಿಂದ ಹರ್ಷ ಉಂಟಾಗುತ್ತದೆ. ವಾರದ ಮಧ್ಯಭಾಗದಲ್ಲಿ ಮನಸಂತೋಷಕರ ಘಟನೆ. ಶುಭದಿನ 23. ದೇವ್ಯಪರಾದ ಕ್ಷಮಾಪನ ಸ್ತೋತ್ರ ಪಠಣ ಮಾಡಿ.




ವೈಯಕ್ತಿಕ ಶ್ರಮದಿಂದ ಹೆಚ್ಚಿನ ಯಶಸ್ಸು ಪಡೆಯಲು ಸಾಧ್ಯವಾಗುತ್ತದೆ. ಆ ಕಾರಣಕ್ಕಾಗಿ ಹಲವು ಕೆಲಸ ಕಾರ್ಯಗಳನ್ನು ಪೂರೈಸಲಾಗುತ್ತದೆ. ಇದರಿಂದ ನಿಮಗೆ ಸಂತುಷ್ಟವಾಗುತ್ತದೆ. ಬಹುದಿನಗಳ ಆಕಾಂಕ್ಷೆ ಪೂರ್ಣವಾಗಲು ವೇದಿಕೆ ಸಿದ್ಧವಾಗುವುದು. ಕುಟುಂಬಸ್ಥರೊಡನೆ ಪ್ರವಾಸ, ಕ್ಷೇತ್ರದರ್ಶನ. ಅರ್ಧಕ್ಕೆ ನಿಂತ ಮನೆಗೆಲಸಕ್ಕೆ ಚಾಲನೆ ದೊರೆಯುವುದು. ಶುಭದಿನ 25. ವೆಂಕಟೇಶ್ವರ ಪ್ರಾರ್ಥನೆ ಮಾಡಿರಿ.




ಸಮಸ್ಯೆಗಳ ಸರಮಾಲೆಯಲ್ಲಿ ಇಡೀವಾರ ಕಳೆಯುತ್ತದೆ. ಸ್ಪರ್ಧಾತ್ಮಕತೆ ಹೆಚ್ಚಿರುವುದರಿಂದ ಹಿನ್ನಡೆಯ ಸಂಭವವಿದೆ. ವಿನಾಕಾರಣ ಭಯದ ವಾತಾವರಣ ನಿರ್ಮಾಣವಾಗಲಿದೆ. ಆದರೆ ಕೌಟುಂಬಿಕ ಸೌಖ್ಯ ಚೆನ್ನಾಗಿರುವುದು. ಕ್ರಯ ವಿಕ್ರಯಗಳಲ್ಲಿ ಒಳ್ಳೆ ಲಾಭ ಕೋರ್ಟ್ ಪ್ರಕರಣಗಳನ್ನು ಮುಂದೂಡಿರಿ. ಸಹೋದರರ ಸಹಕಾರ ಸಿಗುತ್ತದೆ. ಶುಭದಿನ 26. ನವನಾಗನಾಮ ಸ್ತೋತ್ರ ಪಠಿಸಿರಿ.




ವಾರವಿಡೀ ಶುಕ್ರನು ಏರಿಕೆ ಕ್ರಮದಲ್ಲಿ ಶುಭ ನೀಡುವನು. ಜನ್ಮದಲ್ಲಿ ಬುಧ ಶುಕ್ರ ಯುತಿ ಇವೆ. ಉತ್ತಮ ಆರೋಗ್ಯ ನಿಮ್ಮನ್ನು ಖುಷಿಯಾಗಿ ಇಡುತ್ತದೆ. ಅನಿರೀಕ್ಷಿತವಾಗಿ ಭಾಗ್ಯದ ಬಾಗಿಲು ತೆರೆಯುವುದು. ಶತ್ರು ಪರಾಜಯವಾಗುತ್ತಾರೆ. ಬಂಧುಗಳಿಂದ ಶುಭ ಸಂದೇಶ ಸಿಗುತ್ತದೆ. ವಾರದ ಪ್ರಾರಂಭದಲ್ಲಿ ಅಕಸ್ಮಾತ್ ಖರ್ಚು ಎದುರಾಗಬಹುದು. ಶುಭದಿನ 23. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.




ಖರ್ಚು ಹೆಚ್ಚಾಗುವುದರಿಂದ ನಿರಾಶೆಯ ಪ್ರಸಂಗಗಳು ವಾರವಿಡಿ ಮುಂದುವರೆಯುವುದು. ಬರುವ ಲಾಭ ಅರ್ಧದಲ್ಲಿ ತಡೆಯಾಗಿ ಬೇಸರ ಮೂಡಿಸುವುದು. ಸ್ನೇಹಿತರಿಗೆ ಶುಭಕಾರ್ಯಕ್ಕೆ ಸಹಾಯ ಮಾಡುವಿರಿ. ಮಾನಸಿಕ ಗೊಂದಲ ಉಂಟಾಗುತ್ತದೆ. ಹೊಟ್ಟೆನೋವಿನ ಉಪದ್ರವ ಕಾಡುತ್ತದೆ. ಅಧಿಕಾರ ಪ್ರಾಪ್ತಿಗೆ ರಂಗಸಿದ್ಧತೆಗೆ ಕೊಂಚ ತೊಡಕಾಗುತ್ತದೆ. ಶುಭದಿನ 25. ಮಾರುತಿ ಉಪಾಸನೆ ಹನುಮಾನ್ ಕವಚ ಪಠಿಸಿರಿ.




ಶ್ರಮವಿಲ್ಲದೆ ಕೆಲಸಗಳು ನಡೆಯುತ್ತವೆ. ಮಧ್ಯಸ್ಥಿಕೆದಾರರಿಂದ ವಿವಾಹದ ಬಗ್ಗೆ ಶುಭಸುದ್ದಿ ದೊರಕುವುದು. ಹಳೆಯ ಆಪ್ತರು ಹತ್ತಿರವಾಗುವರು. ವ್ಯಾಪಾರದಲ್ಲಿ ಅಧಿಕ ಲಾಭ. ವಾಹನ ಸೌಖ್ಯ. ವಾರಾಂತ್ಯದಲ್ಲಿ ಪ್ರವಾಸದ ಯೋಜನೆ ರೂಪಿಸಿದರೂ ಕೈಗೊಳ್ಳಲು ಏನಾದರೂ ತೊಂದರೆ ಆಗಿ ನಿಲ್ಲುತ್ತದೆ. ಶುಭದಿನ 28. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಈ ತಿಂಗಳು ನೀವು ಶುಭರಾಶಿಗೆ ಪ್ರವೇಶಿಸುತ್ತೀರಿ. ದಶಮದ ಬುಧ ಶುಕ್ರ ಯುತಿಯ ಪ್ರಭಾವದಿಂದ ಅಧಿಕಾರ ಪ್ರಾಪ್ತಿಯಾಗಲಿದೆ. ಸರಕಾರದಿಂದ ಆರ್ಥಿಕ ನೆರವು ಸಿಗುತ್ತದೆ. ನಿಮ್ಮ ಕೆಲಸದಿಂದ ಸಾಮಾಜಿಕ ಮನ್ನಣೆ ದೊರಯಲಿದೆ. ನಿಮ್ಮ ಸಂಗಾತಿಗೆ ಪ್ರಗತಿ ಸಿಗುತ್ತದೆ. ಹೊಸ ಉದ್ಯೋಗ ಶುರುಮಾಡಲು ಸಕಾಲ. ಶುಭ ದಿನ 22. ನವಗ್ರಹ ಸ್ತೋತ್ರ ಪಠಣ ಮಾಡಿರಿ.




ನಿಮ್ಮ ವೈಯಕ್ತಿಕ ಶ್ರಮದಿಂದ ಸಾಡೆಸಾತಿ ಇದ್ದರೂ ಯಶಸ್ಸು ಪಡೆಯುವಿರಿ. ನಿಮ್ಮ ಶಕ್ತಿ ಸಾಮರ್ಥ್ಯದ ಆಧಾರದ ಮೇಲೆ ದೂರದ ಪ್ರವಾಸ ಮಾಡುವ ಯೋಗ ಬರುತ್ತದೆ. ಸ್ತ್ರೀ ಮೂಲಕ ಅರ್ಥಲಾಭದ ಯೋಗ ಇದೆ. ನೌಕರರಿಗೆ ಕೆಲಸದಲ್ಲಿ ಸ್ಥಿರತೆ ಇರಲಿದೆ. ಮನೆಯಲ್ಲಿ ದೇವತಾರ್ಚನೆ ಕಾರ್ಯ ಮಾಡುವಿರಿ. ಕೌಟುಂಬಿಕ ಕಲಹ. ವಾರದ ಕೊನೆಯಲ್ಲಿ ಸಂತಸ. ಶುಭದಿನ 24. ಗೌರಿಪೂಜೆ ಗೋಪೂಜೆ ಮಾಡಿರಿ.




ತೊಂದರೆಯಲ್ಲಿ ಸಿಲುಕುವ ಅಪಾಯ ನಿಮ್ಮ ರಾಶಿಗೆ ಇದೆ. ಹೊಯ್ದಾಡುವ ಮನಸಿನ ನಿಯಂತ್ರಣಕ್ಕೆ ಶ್ರಮಿಸುತ್ತೀರಿ. ಹೆಂಡತಿಗೆ ಅನಾರೋಗ್ಯದಿಂದ ಅನಿರೀಕ್ಷಿತ ಖರ್ಚಾಗುತ್ತದೆ. ಕೆಲಸದಲ್ಲಿ ತೊಂದರೆ ಎದುರಿಸಬೇಕಾದ ಸಂಭವ ಇದೆ. ನೀರಿನಿಂದ ಕಂಟಕ ಇದೆ. ಅಧಿಕಾರ ಭಂಗ ಪ್ರಸಂಗ. ಮಕ್ಕಳ ಆರೋಗ್ಯದಲ್ಲಿ ಏರುಪೇರಾಗುವುದರಿಂದ ಚಿಂತೆಗೆ ಒಳಗಾಗುತ್ತೀರಿ. ಶುಭದಿನ 23. ಸದ್ಗುರು ಆರಾಧನೆ ಮಾಡಿ.




ಅತ್ಯುತ್ತಮ ಶುಭ ಘಟನೆಗಳೊಡನೆ ಆಪತ್ತನ್ನು ಎದುರಿಸುವಿರಿ. ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪ್ರಾಪ್ತಿಯಾಗುತ್ತದೆ. ಇದರಿಂದ ನಿಮಗೆ ಸಾಮಾಜಿಕ ಮನ್ನಣೆ ದೊರಕುವುದು. ಹೊಸವಸ್ತು ಖರೀದಿ ಮಾಡುವ ಬಗ್ಗೆ ಯೋಚಿಸುತ್ತೀರಿ. ಗೃಹಿಣಿಯರು ಆಭರಣ ಖರೀದಿ ಮಾಡುತ್ತೀರಿ. ಕ್ರೀಡಾಪಟುಗಳಿಗೆ ಸನ್ಮಾನದ ಯೋಗ ಹುಡುಕಿಕೊಂಡು ಬರಲಿದೆ. ಶುಭದಿನ 24. ಗಣಪತಿ ಆರಾಧನೆ ಮಾಡಿರಿ




ಬಹು ದಿನದ ಕೋರ್ಟ್ ಪ್ರಕರಣ ಮುಗಿಯುತ್ತದೆ. ನಿಮಗೆ ಚಿಂತೆಗೆ ಕಾರಣವಾದ ಶತ್ರು ನಿಗ್ರಹದಿಂದ ಸಮಾಧಾನ ಮೂಡಲಿದೆ. ಆರೋಗ್ಯದ ತೊಂದರೆಗಳು ಇದ್ದರೆ ಈ ವಾರ ಸುಧಾರಣೆಯಾಗುತ್ತದೆ. ಕೆಲಸದಲ್ಲಿ ಬಡ್ತಿ ಮತ್ತು ವರ್ಗಾವಣೆಯ ಸಾಧ್ಯತೆ ಇದೆ. ಆರೋಗ್ಯ ಉತ್ತಮ. ಶೈಕ್ಷಣಿಕ ಕ್ಷೇತ್ರದವರಿಗೆ ಕೊಂಚ ನಿರಾಳ. ಶುಭದಿನ 28. ಲಕ್ಷ್ಮೀನರಸಿಂಹ ಕ್ಷೇತ್ರ ದರ್ಶನ ಮಾಡಿರಿ.




ಕ್ರೀಡಾಪಟುಗಳಿಗೆ ಉತ್ತಮ ಯಶಸ್ಸು ಸಿಗುತ್ತದೆ. ಷೇರು ವ್ಯವಹಾರದಾರರಿಗೆ ಅನಿರೀಕ್ಷಿತ ಲಾಭ ಸಿಗುತ್ತದೆ. ಮಕ್ಕಳಿಂದ ಯಶಸ್ಸು, ಸ್ಥಾನಮಾನ ಪ್ರಾಪ್ತಿ. ಮನೆ ವಿಷಯಕ್ಕೆ ಇರುವ ಅಡ್ಡಿ ನಿವಾರಣೆ. ದೂರಪ್ರವಾಸ ಮಾಡಲಿದ್ದೀರಿ. ಲೇಖಕರಿಗೆ ಪ್ರಶಸ್ತಿಯ ಗೌರವ. ನಿಮ್ಮ ವರ್ಚಸ್ಸಿಗೆ ಮೆರುಗು ನೀಡುವುದು. ಬಹುದಿನಗಳಿಂದ ನಿರೀಕ್ಷಿತ ಫಲ ಪ್ರಾಪ್ತಿ. ಶುಭದಿನ 25. ಆದಿತ್ಯ ಹೃದಯ ಸ್ತೋತ್ರ ಪಠಿಸಿ.